**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:1169/2022**

**ಪಿ.ಡಬ್ಲ್ಯೂ-3**
**ಸಿ.ಡಬ್ಲ್ಯೂ-1**

**ಸಾಕ್ಷಿಗೆ ದಿನಾಂಕ 17-05-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು : ಆನಂದಪ್ಪ

ತಂದೆಯ ಹೆಸರು : ಫಕೀರಪ್ಪ

ವಯಸ್ಸು : 30 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಕೊಪ್ಪಳ

**ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ**

ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ನನ್ನ ಸ್ನೇಹಿತ. ಮೃತ ಶರಣ ತಂದೆ ಬಸಪ್ಪ ನನ್ನ ಸ್ನೇಹಿತ. ಅವರು ಯಾವ ರೀತಿ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ಅಪಘಾತ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿಲಾಗಿದ್ದು ಸದರಿ ದಾಖಲೆ ಹೇಳಿಕೆ ದೂರು ಆಗಿದ್ದು ಅದನ್ನು ನಿಪಿ-7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆ ಮತ್ತು ನಕಾಶೆಯನ್ನು ಹಾಗೂ ಅವುಗಳ ಮೇಲೆ ಇರುವ ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳನ್ನು ಈಗಾಗಲೇ ನಿಪಿ-1 ಮತ್ತು 2 ಎಂದು ಕ್ರಮವಾಗಿ ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ) ಮತ್ತು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು 4 ಎಂದು ಗುರುತಿಸಲಾಗಿದೆ.** ನಿಪಿ-1, 2 ಮತ್ತು 7 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ. ನಿ.ಪಿ-3 ಮತ್ತು 4 ರ ಫೋಟೋಗೇಳನ್ನು ಯಾವ ಕಾರಣಕ್ಕೆ

ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಕುರಿತು ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕ 08-03-2020 ರಂದು ಅಕ್ರಮ-ಸಕ್ರಮ ಕೆಲಸಕ್ಕೆಂದು ನಾನು, ಆರೋಪಿ ಮೃತ ಶರಣ ಮತ್ತು ಚಾ.ಸಾ-2 ರವರು ನೀರಗುಂದ ಸೈಟಿಗೆ ಯಾಲಕಪ್ಪನಹಟ್ಟಿ ಗ್ರಾಮದಿಂದ ಕೆಎ-37-ಟಿಎ-5796 ನೇ ಟ್ರಾಕ್ಟರ್ ಮತ್ತು ನಂಬರ್ ಇಲ್ಲದ ಟ್ರೈಲರ್ ನಲ್ಲಿ 8 ವಿದ್ಯುತ್ ಕಂಬಗಳನ್ನು ಲೋಡ್ ಮಾಡಿಕೊಂಡು ನೀರಗುಂದ ಗ್ರಾಮಕ್ಕೆ ಹೋಗಲು ಬೆಳಗ್ಗೆ 10-30 ಗಂಟೆಗೆ ಯಾಲಕಪ್ಪನಹಟ್ಟಿ ಸೈಟಿನಿಂದ ಹೊರಟೆವು ಎಂದರೆ ಸರಿಯಲ್ಲ. ಆರೋಪಿ ಟ್ರಾಕ್ಟರ್ ಅನ್ನು ಚಾಲನೆ ಮಾಡುತ್ತಿದ್ದನು ಎಂದರೆ ಸರಿಯಲ್ಲ. ನಾವುಗಳು ಟ್ರೈಲರ್ ನಲ್ಲಿ ಕುಳಿತುಕೊಂಡಿದ್ದೆವು ಎಂದರೆ ಸರಿಯಲ್ಲ. ಸುಮಾರು 11 ಗಂಟೆಗೆ ಹೊಸದುರ್ಗ ಕಡೆಯಿಂದ ಅಜ್ಜಂಪುರ ರಸ್ತೆಯ ಕಡೆಗೆ ಹೋಗುವಾಗ ಬೋಕಿಕೆರೆ ಗೇಟ್ ಹತ್ತಿರ ಆರೋಪಿ ಅತೀ ವೇಗ ಮತ್ತು ಅಜಾಗರೂಕತೆಯಿಂದ ಟ್ರಾಕ್ಟರ್ ಟ್ರೈಲರ್ ಅನ್ನು ಚಲಾಯಿಸಿಕೊಂಡು ಹೋದ ಕಾರಣ ಸದರಿ ಟ್ರಾಕ್ಟರ್ ಟ್ರೈಲರ್ ನಿಯಂತ್ರಣ ತಪ್ಪಿ ರಸ್ತೆಯ ಬದಿಗೆ ಬಿದ್ದು ಪಲ್ಟಿ ಹೊಡೆಯಿತು ಎಂದರೆ ಸರಿಯಲ್ಲ. ಪರಿಣಾಮವಾಗಿ ವಿದ್ಯುತ್ ಕಂಬಗಳು ನಮ್ಮ ಮೇಲೆ ಬೀಳುವಾಗ ನಾನು ಮತ್ತು ಚಾ.ಸಾ-2 ಜಿಗಿದು ತಪ್ಪಿಸಿಕೊಂಡೆವು ಎಂದರೆ ಸರಿಯಲ್ಲ. ಆಗ ನಮಗೆ ಸಣ್ಣ-ಪುಟ್ಟ ಗಾಯಗಳು ಆದವು ಎಂದರೆ ಸರಿಯಲ್ಲ. ಆದರೆ ಮೃತ ಶರಣ ತಪ್ಪಿಸಿಕೊಳ್ಳಲು ಆಗದ ಕಾರಣ ಆತನ ಮೇಲೆ ವಿದ್ಯುತ್ ಕಂಬಗಳು ಬಿದ್ದು ತಲೆಗೆ ಮತ್ತು ಇತರ ಕಡೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟನು ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಆರೋಪಿಯ ವಿರುದ್ದ ಕಾನೂನು ಕ್ರಮ ಜರುಗಿಸುವಂತೆ ನಿಪಿ-1 ರಂತೆ ನಾನು ಹೇಳಿಕೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 08-03-2022 ರಂದು ಚಾಸಾ-13 ರವರು ಕೃತ್ಯ ಸ್ದಳಕ್ಕೆ ಬಂದಿದ್ದು ನಾನು ತೋರಿಸಿದ ಸ್ದಳದಲ್ಲಿ ಚಾಸಾ-2 ಮತ್ತು 8 ರವರ ಸಮಕ್ಷಮ ಸಂಜೆ 5-30

ರಿಂದ 6 ಗಂಟೆಯವರೆಗೆ ನಿಪಿ-1 ರಂತೆ ಸ್ಥಳ ಪಂಚನಾಮೆ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರಂತೆ ಕೃತ್ಯಸ್ಥಳ ನಕಾಶೆ ತಯಾರಿಸಿದ್ದು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ ನಿಪಿ-3 ಮತ್ತು 4 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**ದಿನಾಂಕ 28-05-2020 ರಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ ಕಾರಣ ನಿ.ಪಿ-8 ಎಂದು ಗುರುತಿಸಲಾಯಿತು.**

ನಿಪಿ-7 ರಂತೆ ಹೇಳಿಕೆ ದೂರು ನೀಡಿದ್ದು ನಿಪಿ-1 ರ ಮಹಜರ್ ಕಾಲದಲ್ಲಿ ಹಾಜರಿದ್ದುದ ನಿ.ಪಿ-8 ರಂತೆ ಮರುಹೇಳಿಕೆ ನೀಡಿದ್ದರೂ ಸಹ ಆರೋಪಿ ನನ್ನ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀಮತಿ ಹೆಚ್.ಎಸ್.ಆರ್ ವಕೀಲರಿಂದಃ</u>**

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ಸಲ್ಲಿಸುತ್ತಾರೆ._

**<u>ಮರು ವಿಚಾರಣೆ : ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಇದೆ.**

**(ಪ್ರಸನ್ನಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಹೊಸದುರ್ಗ.**